# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 870
2. ಮಾನ್ಯ ವಿಧಾನ ಪರಿಷತ್ ಸದಸ್ಯರ ಹೆಸರು : ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ. (ವಿಧಾನ ಸಭೆಯಿಂದ ಚುನಾಯಿತರಾದವರು)
3. ಉತ್ತರಿಸುವ ದಿನಾಂಕ : 22.02.2024
4. ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಹಾಗೂ ಹುದ್ದೆಗಳ ವಿವರ ನೀಡುವುದು; ಮತ್ತು ಅವರು ಸೇವೆ ಸಲ್ಲಿಸುತ್ತಿರುವ ಅವಧಿಯ ಮಾಹಿತಿ ನೀಡುವುದು; | ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಹಾಗೂ ಹುದ್ದೆಗಳ ವಿವರ ಮತ್ತು ಅವರು ಸೇವೆ ಸಲ್ಲಿಸುತ್ತಿರುವ ಅವಧಿಯ ಮಾಹಿತಿಯನ್ನು ಅನುಬಂಧ-1ರ ಲ್ಲಿರಿಸಿದೆ. |
| ಆ) | ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಮಾಹಿತಿಯೊಂದಿಗೆ ನೀಡುವುದು; ಹಾಗೂ ನಿರ್ದೇಶಕರ ಹುದ್ದೆಗೆ ಪದೋನ್ನತಿ ನೀಡಲು ಅನುಸರಿಸುವ ನಿಯಮಾವಳಿಗಳ ಸಂಪೂರ್ಣ ಮಾಹಿತಿ ನೀಡುವುದು; | 2012 ಮತ್ತು 2014 ನೇ ಸಾಲಿನಲ್ಲಿ ಪರಿಷ್ಕರಿಸಿದ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರತಿಯನ್ನುಅನುಬಂಧ-2ರಲ್ಲಿಸಿದೆ.<br>ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ನಿರ್ದೇಶಕರ ಹುದ್ದೆಗೆ ಪದೋನ್ನತಿ ನೀಡಲು ಪ್ರಸ್ತಾವನೆಯನ್ನು ಇಲಾಖಾ ಮುಂಬಡ್ತಿ ಸಮಿತಿಯ ಮುಂದೆ ಮಂಡಿಸಲಾಗುತ್ತಿದೆ. |
| ಇ) | ಸಿ.ಆರ್.ಪಿ.ಸಿ. 25 (ಎ), ಕರ್ನಾಟಕ ತಿದ್ದುಪಡಿ ಕಾಯ್ದೆ 39/2012 ಮತ್ತು ಅಭಿಯೋಗ ಮತ್ತು ವ್ಯಾಜ್ಯಗಳ ಇಲಾಖೆಯ ವೃಂದ ಮತ್ತು ನೇಮಕಾತಿಯ ನಿಯಮಾವಳಿಗಳ ಪ್ರಕಾರ ಅಭಿಯೋಜನಾ ಇಲಾಖೆಯಲ್ಲಿನ ಉಪ ನಿರ್ದೇಶಕರ ಹುದ್ದೆಯಲ್ಲಿ ಒಂದು ವರ್ಷ ಸೇವೆ ಸಲ್ಲಿಸಿರುವ ಅಧಿಕಾರಿಗಳನ್ನು ನಿರ್ದೇಶಕರ ಹುದ್ದೆಗೆ ಆಯ್ಕೆಯ ಮೂಲಕ ಮುಂಬಡ್ತಿ ನೀಡಬೇಕೆಂದು ನಿಯಮವನ್ನು ಪಾಲಿಸಲಾಗುತ್ತಿದೆಯೇ; ಇಲ್ಲದಿದ್ದಲ್ಲಿ ಸ್ಪಷ್ಟ ಕಾರಣವನ್ನು ನೀಡುವುದು; | ವೃಂದ ಮತ್ತು ನೇಮಕಾತಿಯ ನಿಯಮಾವಳಿಗಳ ಪ್ರಕಾರ ಅಭಿಯೋಗ ಉಪ ನಿರ್ದೇಶಕರಾಗಿ ಎರಡು ವರ್ಷ ಅಥವಾ ಒಂದು ವರ್ಷ ಸೇವೆ ಸಲ್ಲಿಸಿದ ಅಧಿಕಾರಿಗಳನ್ನು ನಿರ್ದೇಶಕರ ಹುದ್ದೆಗೆ ಪರಿಗಣಿಸಲು ಅವಕಾಶ ಕಲ್ಪಿಸಿದೆ.<br><br>ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 17 ಎಸ್ ಹೆಚ್‌ಡಿ 2022ರ ದಿನಾಂಕ: 07.04.2022ರಲ್ಲಿ ಇಲಾಖಾ ಮುಖ್ಯಸ್ಥರು/ಪ್ರಧಾನ ಅಭಿಯಂತರರು ಹಾಗೂ ಮುಖ್ಯ ಅಭಿಯಂತರರ ಹುದ್ದೆಯ ಮುಂಬಡ್ತಿಗೆ ಇಲಾಖಾ ಮುಂಬಡ್ತಿ ಸಮಿತಿಯನ್ನು ಪುನಃ ರಚಿಸಿ ಆದೇಶ ಹೊರಡಿಸಲಾಗಿರುತ್ತದೆ.<br><br>ಈ ಹಿನ್ನೆಲೆಯಲ್ಲಿ, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ನಿರ್ದೇಶಕರ ಹುದ್ದೆಗೆ ಸ್ಥಾನಪನ್ನ ಮುಂಬಡ್ತಿ ನೀಡುವ ಸಂಬಂಧ ದಿನಾಂಕ:04.04.2022, 02.05.2022, 13.06.2022, 03.08.2022 ರಂದು ಇಲಾಖಾ ಮುಂಬಡ್ತಿ ಸಮಿತಿ ಸಭೆಗಳನ್ನು ನಡೆಸಲು ನಿಗಧಿಪಡಿಸಲಾಗಿದ್ದು, ಆಡಳಿತಾತ್ಮಕ ಕಾರಣಗಳಿಂದಾಗಿ ಮುಂದೂಡಲಾಗಿತ್ತು.<br>ಮುಂದುವರೆದು, ದಿನಾಂಕ:07.12.2022ರಂದು ಸಭೆ ನಿಗಧಿಯಾಗಿದ್ದು, ಸದರಿ ಸಭೆಗೆ ಇಲಾಖಾ |
| ಈ) | ಸದರಿ ಇಲಾಖೆಯಲ್ಲಿ ಅಭಿಯೋಗ ಉಪ ನಿರ್ದೇಶಕರಾಗಿ ಒಂದು ವರ್ಷ ಸೇವೆ ಸಲ್ಲಿಸಿ, ನಿರ್ದೇಶಕರ ಹುದ್ದೆಗ ಬಡ್ತಿ ಹೊಂದಲು ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಅರ್ಹತೆ ಹೊಂದಿದ್ದರೂ ಸಹ ಅವರಿಗೆ ಬಡ್ತಿ ನೀಡದೆ ಅನ್ಯ ಇಲಾಖೆಯ ಅಧಿಕಾರಿಯನ್ನು ಖಾಲಿ ಇರುವ ನಿರ್ದೇಶಕರ ಹುದ್ದೆಗೆ ಅಧಿಕ ಪ್ರಭಾರದಲ್ಲಿರಿಸಿ, ಆದೇಶ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇಲಾಖೆಯ ವೃಂದ ಮತ್ತು ನೇಮಕಾತಿ | |

| | | |
|---|---|---|
| | ನಿಯಮಗಳನ್ನು ಉಲ್ಲಂಘಿಸಿದಂತೆ ಆಗುವುದಿಲ್ಲವೇ; | ಮುಖ್ಯಸ್ಥರು ಸಲ್ಲಿಸಿರುವ ಪ್ರಸ್ತಾವನೆಯ ಅಂಶಗಳನ್ನು ಮಾಹಿತಿಗಾಗಿ ಸಲ್ಲಿಸಿರುತ್ತಾರೆ. |
| ಊ) | ಹಿಂದಿನ ಅಧಿಕ ಪ್ರಭಾರ ಆದೇಶವನ್ನು ರದ್ದುಗೊಳಿಸಿ ಇಲಾಖೆಯಲ್ಲಿರುವ ಅರ್ಹತೆ ಹೊಂದಿದ ಹಿರಿಯ ಅಧಿಕಾರಿಗಳನ್ನು ಪದೋನ್ನತಿಗೆ ಪರಿಗಣಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ; ಇಲ್ಲದಿದ್ದಲ್ಲಿ ಸ್ಪಷ್ಟ ಕಾರಣಗಳನ್ನು ನೀಡುವುದು? | ಅಭಿಯೋಗ ಇಲಾಖೆಯ ಶ್ರೀಮತಿ ಅಂಜನಾ ಚವ್ಹಾಣ್, ಇವರು ದಿನಾಂಕ:05.04.2014ರ ಸರ್ಕಾರದ ಆದೇಶದಲ್ಲಿ ವಾಗ್ದಂಡನೆ ವಿಧಿಸಿರುವ ಆದೇಶವನ್ನು ವಜಾಗೊಳಿಸುವಂತೆ, ಪೂರ್ವಾನ್ವಯವಾಗಿ ಮುಂಬಡ್ತಿ ನೀಡುವಂತೆ ಮತ್ತು ಜೇಷ್ಠತಾ ಪಟ್ಟಿಯನ್ನು ಸಹ ನಿಗಧಿಪಡಿಸುವಂತೆ ಕೋರಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಕಲಬುರಗಿ ಪೀಠ ಇಲ್ಲಿ ಅರ್ಜಿ ಸಂಖ್ಯೆ:20294/2022ರನ್ನು ದಾಖಲಿಸಿರುತ್ತಾರೆ.<br><br>ಮಾನ್ಯ ನ್ಯಾಯ ಮಂಡಳಿಯು ದಿನಾಂಕ:16.08.2022ರ ಆದೇಶದಲ್ಲಿ ಸದರಿ ವಾಗ್ದಂಡನೆ ಆದೇಶವನ್ನು ರದ್ದುಗೊಳಿಸಿರುತ್ತದೆ ಹಾಗೂ ಅಧಿಕಾರಿಯವರಿಗೆ ಪೂರ್ವಾನ್ವಯವಾಗಿ ಮುಂಬಡ್ತಿ ನೀಡುವಂತೆ ಮತ್ತು ಜೇಷ್ಠತೆಯನ್ನು ನಿಗಧಿಪಡಿಸುವಂತೆ ಆದೇಶಿಸಲಾಗಿರುತ್ತದೆ.<br><br>ಮಾನ್ಯ ನ್ಯಾಯ ಮಂಡಳಿಯ ಆದೇಶದನ್ವಯ ಸರ್ಕಾರವು ದಿನಾಂಕ:13.09.2022ರ ಆದೇಶದಲ್ಲಿ ಶ್ರೀಮತಿ ಅಂಜನಾ ಚವ್ಹಾಣ್ ಇವರಿಗೆ ಪೂರ್ವಾನ್ವಯವಾಗಿ ಮುಂಬಡ್ತಿ ಮತ್ತು ಜೇಷ್ಠತೆಯಲ್ಲಿ ಇವರ ಜೇಷ್ಠತೆಯನ್ನು ಶ್ರೀ ಬಿ. ಜಯರಾಂ ಹಾಗೂ ಶ್ರೀಮತಿ ಅಂಜಲಿದೇವಿ ಇವರ ಮಧ್ಯದಲ್ಲಿ ಜೇಷ್ಠತೆಯನ್ನು ನಿಗಧಿಪಡಿಸಿ ಆದೇಶಿಸಲಾಗಿದೆ.<br><br>ಅಭಿಯೋಗ ಇಲಾಖೆಯ ಶ್ರೀಮತಿ ಅಂಜಲಿದೇವಿ, ಅಭಿಯೋಗ ಉಪ ನಿರ್ದೇಶಕರು ಇವರು ಮಾನ್ಯ ಉಚ್ಚ ನ್ಯಾಯಾಲಯ, ಕಲಬುರಗಿ ಪೀಠ ಇಲ್ಲಿ ರಿಟ್ ಅರ್ಜಿ ಸಂಖ್ಯೆ:202305/2022ನ್ನು ದಾಖಲಿಸಿದ್ದು, ಸದರಿ ಅರ್ಜಿಯಲ್ಲಿ ಶ್ರೀಮತಿ ಅಂಜನಾ ಚವ್ಹಾಣ್, ಇವರ ಸಂಬಂಧ ಮಾನ್ಯ ಕೆ.ಎ.ಟಿ ಅರ್ಜಿ ಸಂಖ್ಯೆ:20294/2022ರಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ: 16.08.2022ರಂದು ನೀಡಿರುವ ಆದೇಶವನ್ನು ಪ್ರಶ್ನಿಸಿ ಅರ್ಜಿ ಸಲ್ಲಿಸಿರುತ್ತಾರೆ.<br><br>ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 19.10.2022 ರಂದು ಈ ಕೆಳಗಿನಂತೆ ಮಧ್ಯಂತರ ಆದೇಶವನ್ನು ನೀಡಿರುತ್ತದೆ.<br><br>..."Respondent No,1 &2 shall not take up DPC proceedings to the post of Director of Prosecution till next hearing date" |

| | | |
|---|---|---|
| | | ಮೇಲಿನ ಮಧ್ಯಂತರ ಆದೇಶದನ್ವಯ ಅಭಿಯೋಗ ನಿರ್ದೇಶಕರ ಹುದ್ದೆಗೆ ಬಡ್ತಿ ನೀಡುವ ಸಂಬಂಧ ಡಿಪಿಸಿ ಸಭೆಯನ್ನು ಮುಂದೂಡಲಾಗಿರುತ್ತದೆ.<br><br>ತದನಂತರ, ಮಾನ್ಯ ನ್ಯಾಯಾಲಯ, ಸದರಿ ರಿಟ್ ಅರ್ಜಿಯನ್ನು ದಿನಾಂಕ: 29.11.2023ರಂದು ವಜಾಗೊಳಿಸಿ ಆದೇಶಿಸಿರುತ್ತದೆ.<br><br>ಈ ಹಿನ್ನೆಲೆಯಲ್ಲಿ, ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ನಿರ್ದೇಶಕರ ಹುದ್ದೆಗೆ ಸ್ಥಾನಪನ್ನ ಮುಂಬಡ್ತಿ ನೀಡುವ ಬಗ್ಗೆ ಇಲಾಖಾ ಮುಂಬಡ್ತಿ ಸಮಿತಿ ಸಭೆ ಮುಂದೆ ಮಂಡಿಸಲು ಅಗತ್ಯ ಕ್ರಮವಹಿಸಲಾಗುತ್ತಿದೆ. |

ಒಇ 58 ಪಿಪಿಇ 2024(ಇ)

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು